'ಮಾಲತಿ' ನಾಟಕದ ಮೂಲಕ ಹೆಜ್ಜೆ ಇಟ್ಟವರು ಮುಂದೆ ನಾಟಕಗಳನ್ನು ಬರೆಯುತ್ತಲೇ ಹೋದರು. ಸಾಹಿತ್ಯದ ಮೌಲ್ಯ, ರಂಗಭೂಮಿ ಅಗತ್ಯ, ನೋಡುಗರ ನಿರೀಕ್ಷೆ ಎಲ್ಲವನ್ನು ಅಳವಡಿಸಿಕೊಂಡು ರಚನೆ, ನಟನೆ, ನಿರ್ದೇಶನ ಎಲ್ಲದರಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದು ಅವರ ವೈಶಿಷ್ಟ್ಯ.

ಪಾಶ್ಚಾತ್ಯ ನಾಟಕಗಳನ್ನು ಕನ್ನಡಕ್ಕೆ ತಂದರು; ಅಲ್ಲಿಯ ಪಾತ್ರಗಳನ್ನು ಈ ನೆಲದವರಿಗೆ ತೋರಿಸಿದರು. ನಮ್ಮ ನೋಡುಗರೊಂದಿಗೆ ರಂಗ ನಟ ಸಂಭಾಷಿಸುವಂತೆ ಮಾಡಿದರು. ಹೀಗಾಗಿ ಪರಕೀಯ ಹೆಸರುಗಳ ಜಾಗದಲ್ಲಿ ನಮ್ಮ ರಾಮು, ಕೃಷ್ಣ, ಭೀಮು, ಗುಂಡ ಸೇರಿ ಹೋದರು.

ಅನುವಾದ ಅನ್ನುವುದಕ್ಕಿಂತ ರೂಪಾಂತರ ಎಂದರೆ ಹೆಚ್ಚು ಹತ್ತಿರವಾದೀತು. ಪರ್ವತವಾಣಿ ನಾಟಕಗಳು ಶೇಕ್ಸ್‌ಪಿಯರ್, ಚೆಕಾವ್, ಗೋಲ್ಡ್‌ಸ್ಮಿತ್ ಮೊದಲಾದವರು ಕನ್ನಡ ಭಾಷೆಯಲ್ಲಿ ಮೂಡಿ ಬಂದಾಗ ಕನ್ನಡತನವನ್ನು ಮೈಗೂಡಿಸಿಕೊಂಡಿದ್ದರು.

ಮೀನಾ ಮದುವೆ, ನಾಯಿಬಾಲ, ಪಿಂಡಕ್ಕಾಗಿ, ಕವಿ ಭಿಕ್ಷೆ, ಕೀಚಕ, ಉಂಡಾಡಿ ಗುಂಡ, ಹಣ ಹದ್ದು, ಸುಂದ್ರೋಪಸುಂದ್ರು, ರೋಗಾಲಾಪನೆ– ಹೀಗೆ ಪರ್ವತವಾಣಿಯವರು ಒಂದಕ್ಕಿಂತ ಒಂದು ವಿಭಿನ್ನ ಬಗೆಯ ನಾಟಕಗಳನ್ನು ಬರೆದರು. ಇವುಗಳಲ್ಲಿ ಕೆಲವು ಅನುವಾದಗಳಾದರೆ ಇನ್ನೂ ಕೆಲವು ರೂಪಾಂತರಗಳು. ತಮ್ಮ ಕಣ್ಮುಂದೆ ನಡೆದ ಘಟನೆಗಳನ್ನು, ಜರುಗಿದ ವಿಚಾರಗಳನ್ನು ನಾಟಗಳನ್ನಾಗಿಸಿದ್ದು ಅವರ ಪ್ರತಿಭೆಯನ್ನು ತೋರುತ್ತದೆ.

ಸ್ವತಂತ್ರ ನಾಟಕಗಳಾಗಲಿ, ರೂಪಾಂತರವಾಗಿರಲಿ ಅಪರಿಮಿತ ಅರ್ಥಗಳನ್ನು ಹೊರಡಿಸುತ್ತಿದ್ದ ಪರ್ವತವಾಣಿ ಅವರು ಕನ್ನಡ ನಾಟಕ ಸಾಹಿತ್ಯಕ್ಕೆ ಗಟ್ಟಿ ಕೊಡುಗೆ ನೀಡಿದರು. ನಗೆ ಹೊನಲನ್ನು ತಮ್ಮ ನಾಟಕಗಳಲ್ಲಿ ಯಥೇಚ್ಛವಾಗಿ ಹರಿಸುತ್ತಿದ್ದರೂ ಆಳದಲ್ಲಿ ಸಮಾಜದ ನೋವನ್ನು ಹುದುಗಿಸಿರುತ್ತಿದ್ದರು.

ಕಾಲೇಜು ವಿದ್ಯಾರ್ಥಿಗಳಿಗಾಗಿ ಸಣ್ಣ ಸಣ್ಣ ಉತ್ಸಾಹಿ ಹವ್ಯಾಸಿ ತಂಡಗಳಿಗಾಗಿ 23ಕ್ಕೂ ಹೆಚ್ಚು ಸ್ವತಂತ್ರ ನಾಟಕಗಳನ್ನು ಬರೆದ ಪರ್ವತವಾಣಿಯವರು 'ನಂಕಂಪ್ನಿ' ನಾಟಕ ಸಂಸ್ಥೆಯನ್ನು ಹುಟ್ಟು ಹಾಕಿ ನಾಡಿನುದ್ದಕ್ಕೂ ನಾಟಕಗಳನ್ನು ಪ್ರದರ್ಶಿಸಿದರು. ಹಲವು ನಟ ನಟಿಯರನ್ನು, ನಿರ್ದೇಶಕರನ್ನು ಬೆಳಕಿಗೆ ತಂದ ಅವರು ಪ್ರತಿಭಾವಂತ ನಟರಾಗಿದ್ದು ಹತ್ತಾರು ಪ್ರಮುಖ ನಾಟಕಗಳಲ್ಲಿ ಮಹತ್ವದ ಪಾತ್ರಗಳ ನಿರ್ವಹಣೆಯಿಂದ ಪ್ರೇಕ್ಷಕರ ಗಮನ ಸೆಳೆದರು.

ಆಷಾಢಭೂತಿ ನಾಟಕದಲ್ಲಿ ಸುಬ್ಬಾಶಾಸ್ತ್ರೀ ಪಾತ್ರವನ್ನು ಸೊಗಸಾಗಿ ಅಭಿನಯಿಸಿದ ಪರ್ವತವಾಣಿ, ಶಾಕುಂತಲದಲ್ಲಿ ದುಷ್ಯಂತನಾಗಿ ಮಿಂಚಿದರು. 'ಮೃಚ್ಛಕಟಿಕ', 'ಕಬೀರ' ನಾಟಕಗಳಲ್ಲೂ ಅಭಿನಯ ಚತುರತೆ ಪ್ರದರ್ಶಿಸಿದರು. ಪಾತ್ರಗಳ ಔಚಿತ್ಯ ಅರಿತು ಸೃಷ್ಟಿಸುವುದನ್ನು ಕರಗತ ಮಾಡಿಕೊಂಡಿದ್ದ ಅವರು ಆಯಾ ಪಾತ್ರಗಳಿಗೆ ತಕ್ಕಂತೆ ನಡೆ–ನುಡಿ ಹೊಂದಿಸುವಲ್ಲಿ ಸಿದ್ಧಹಸ್ತರಾಗಿದ್ದರು.

ಅವರು ಕನ್ನಡಿಸಿದ 'ಬಹದ್ದೂರ್ ಗಂಡ' ಅತಿ ಹೆಚ್ಚು ದಿನ ನಿರಂತರವಾಗಿ (140 ಪ್ರದರ್ಶನ) ನಡೆದ ಹವ್ಯಾಸಿ ನಾಟಕವೆಂಬ ಹೆಗ್ಗಳಿಕೆ ಪಡೆದಿದೆ. ರೇಡಿಯೊ ನಾಟಕಗಳಲ್ಲೂ ಹೆಸರು ಮಾಡಿದ್ದ ಪರ್ವತವಾಣಿ ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಪಿ. ಲಂಕೇಶರ 'ಪಲ್ಲವಿ', 'ಅನುರೂಪ', ಸಿಂಗೀತಂ ಶ್ರೀನಿವಾಸರಾವ್ ಅವರ 'ಭಾಗ್ಯದ ಲಕ್ಷ್ಮೀ ಬಾರಮ್ಮ', 'ದಂಗೆ ಎದ್ದ ಮಕ್ಕಳು', 'ಶ್ರುತಿ ಸೇರಿದಾಗ' ಸಿನಿಮಾಗಳಲ್ಲಿ ನಟಿಸಿದ್ದರು.

⌘